ವಹಿಸಿಕೊಂಡಿದ್ದಾರೆ. ಮಿನಿಮಮ್ ರೇಟ್ ಮೊದಲಿಗಿಂತ ಡಬಲ್ ಆಗಿದ್ದರೂ ಕೂಡ ಪರ್ ಎಚ್. ಪಿ. ಇಲೆಕ್ಟ್ರಿಸಿಟಿಗೆ ಸರಾಸರಿ 100 ರೂಪಾಯಿಮೇಲೆ ಬೋರ್ಡಿಗೆ ಖರ್ಚಾಗುತ್ತಿದೆ. ಐ.ಪಿ. ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುತ್ತಿರುವುದರಿಂದ ಬೋರ್ಡಿಗೆ ಈಗಾಗಲೇ 50 ಪರ್‌ಸೆಂಟ್ ಲಾಸ್ ಆಗುತ್ತಿದೆ. ಐ.ಪಿ. ಸೆಟ್ಟುಗಳಿಗೆ ಮತ್ತು ರೂರಲ್ ಇಲೆಕ್ಟ್ರಿಫಿಕೇಷನ್‌ನ್ನು ಹೆಚ್ಚು ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಬೋರ್ಡಿನವರು ಎಲ್.ಐ.ಸಿ. ಮತ್ತು ಷೆಡ್ಯೂಲ್ ಬ್ಯಾಂಕ್‌ಗಳಿಂದ ಸಾಲ ಪಡೆಯುತ್ತಿದ್ದಾರೆ. ಅವರು ಏಳೂವರೆಯಿಂದ ಎಂಟೂವರೆಯವರೆಗೆ ಬಡ್ಡಿ ಹಾಕುತ್ತಿದ್ದಾರೆ. ಈ ರೀತಿಯಿಂದ ಸಾಲ ತೆಗೆದುಕೊಂಡು ರೂರಲ್ ಎಲಕ್ಟ್ರಿಫಿಕೇಷನ್‌ಗೆ ವಿದ್ಯುಚ್ಛಕ್ತಿ ಒದಗಿಸುತ್ತಿರುವುದರಿಂದ ಪ್ರತಿವರ್ಷ ಬಹಳ ದೊಡ್ಡಿಗೆ ಬೋರ್ಡಿಗೆ ಹಾನಿಯಾಗುತ್ತಿದೆಯೇ ಹೊರತು ಇದರಿಂದ ಲಾಭವಾಗುತ್ತಿಲ್ಲ.

ಅಧ್ಯಕ್ಷರು.—ನೆಕ್ಸ್ಟ್ ಕೊಶ್ಚನ್.

ಶ್ರೀ ಪಿ. ವೆಂಕಟಗಿರಿಯಪ್ಪ.—ನನಗೆ ಪ್ರಶ್ನೆ ಕೇಳಲು ಅವಕಾಶ ಕೊಡದೇ ಇದ್ದುದರಿಂದ ನಾನು ಎತೋಧಿಸಿ ವಾಕ್ ಔಟ್ ಮಾಡುತ್ತೇನೆ.

Construction of a Bridge across Shagale Halla in Channagiri Taluk

360. Sri N. G. HALAPPA (Channagiri).—

Will the Minister for Public Works be pleased to state :—

(*a*) whether any estimate has been prepared for the Construction of a bridge across Shagale Halla near Tanigere in Channagiri Taluk ;

(*b*) if so, estimated cost of the same and the stage at which it is pending ;

(*c*) whether the Government intend taking up the work without any further delay in view of the importance of this bridge ?

Sri BASAVARAJ MAGAVI (Deputy Minister for Public Works).—

(*a*) Yes.

(*b*) (i) Estimated Cost Rs. 3. 61 lakhs.

(ii) Not yet approved.

(*c*) Will be considered subject to the availability of funds.

ಶ್ರೀ ಎನ್. ಜಿ. ಹಾಲಪ್ಪ.—ಈ ಸೇತುವೆ ಏನಿದೆ ಅದು ಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಬರುತ್ತದೆ. ಸುಂತೆ ಬೆನ್ನೂರಿನಿಂದ ದಾವಣಗೆರೆಗೆ ಹೋಗಬೇಕಾದರೆ 18 ಮೈಲಿ ಇದೆ. ಆದರೆ ಈಗ 30 ಮೈಲಿ ಸುತ್ತಿಕೊಂಡು ಹೋಗಬೇಕಾಗಿದೆ. ಆದ್ದರಿಂದ ಈ ಬ್ರಿಜ್‌ನ್ನು ಆದಷ್ಟು ಬೇಗನೆ ಅಪ್ರೂವ್ ಮಾಡುತ್ತೀರಾ ?

†ಶ್ರೀ ಬಸವರಾಜ ಮಾಗಾವಿ.—ಈ ಸೇತುವೆಯನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಸರಕಾರದವರು ಪ್ಲಾನು ಮತ್ತು ಎಸ್ಟಿಮೇಟು ತಯಾರು ಮಾಡಿಸಿದ್ದಾರೆ. ಹಣದ ಅಭಾವದಿಂದ ಅದನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ.

ಶ್ರೀ ಎನ್. ಜಿ. ಹಾಲಪ್ಪ.—ಇದು ಇರಿಗೇಷನ್ ಅಚ್ಚುಕಟ್ಟಿನಲ್ಲಿ ಬರುವುದರಿಂದ ಭದ್ರಾ ಪ್ರಾಜೆಕ್ಟ್‌ನಿಂದ ಇದಕ್ಕೆ ಹಣ ಒದಗಿಸಿ ಆದಷ್ಟು ಜಾಗ್ರತೆ ಇದನ್ನು ಈ ವರ್ಷವೇ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಸಾಧ್ಯವಾದಷ್ಟು ಮಟ್ಟಿಗೆ ಮುಂದಿನ ವರ್ಷ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದು ಹಣದಮೇಲೆ ಅವಲಂಬಿಸುತ್ತದೆ.

Sri H. SIDDAVEERAPPA.—Does the Minister know that all irrigation track roads and the expenses thereof are included in the Bhadra Project and the amount that has been allocated and earmarked for this purpose has not been utilised ?

Sri BASAVARAJ MAGAVI.—No. This road was transferred to C & D. for construction.

Sri H. SIDDAVEERAPPA.—I have been saying that funds are earmarked in the Bhadra Project itself for irrigation roads.

Sri BASAVARAJ MAGAVI.—Yes, Sir. Even for that, we do not find funds this time. We are doing it next time.

Legislation for the Creation of Zilla Parishads

411. Sri SIDDAIAH KASIMATH (Shirahatti).—

Will the Minister for Development be pleased to state :—

(*a*) whether Government is bringing any legislation for the creation of Zilla Parishads ;

(*b*) if so, when ?

Sri P. M. NADGOUDA (Minister for Development).—

(*a*) Yes.

(*b*) As early as possible.

ಶ್ರೀ ಸಿದ್ದಯ್ಯ ಕಾಶೀಮಠ್.—ಸರಕಾರದವರು ಜಿಲ್ಲಾ ಪರಿಷತ್ತುಗಳನ್ನು ಇಲ್ಲಿಯವರೆಗೆ ಜಾರಿಗೆ ತರದೇ ಇರುವುದಕ್ಕೆ ಪ್ರಬಲವಾದ ಕಾರಣವೇನು ?

ಶ್ರೀ ಪಿ. ಎಂ. ನಾಡಗೌಡ.—ಜಿಲ್ಲಾ ಪರಿಷತ್ತಿನ ಬಗ್ಗೆ ಒಂದು ಮಸೂದೆ ಬಂದಿತ್ತು. ಅದು ಹೌಸ್ ಆಫ್ ಲೆಜಿಸ್ಲೇಚರು ಪ್ರೊರೋಗ್ ಆದಮೇಲೆ ಲ್ಯಾಪ್ಸ್ ಆಯಿತು. ಆದ್ದರಿಂದ ಲೀಗಲ್ ಕಾಂಪ್ಲಿಕೇಷನ್ಸ್ ಮತ್ತು ಹೊಸ ಅನುಭವದ ಮೇರೆಗಿದನ್ನು ಪುನಃ ವಿಚಾರ ಮಾಡಿ ಹೊಸ ಬಿಲ್ಲು ಸಭೆಯ ಮುಂದೆ ತರಬೇಕೆಂದು ಮಾಡಿದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಹೊಸ ಅನುಭವದಮೇಲೆ ಹೊಸ ಬಿಲ್ಲನ್ನು ಎಷ್ಟು ವರ್ಷದ ಮೇಲೆ ಸಭೆಯ ಮುಂದೆ ಇಡುತ್ತೀರಿ ? ಹೊಸ ಮಂತ್ರಿಗಳು ಬಂದಮೇಲೆ ಇಡುತ್ತೀರಾ ಅಥವಾ ತಾವೇ ಇಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಹೊಸ ಮಂತ್ರಿಗಳು ಬಂದಮೇಲಲ್ಲ. ಇದೇ ಮಂತ್ರಿಮಂಡಲ ಇಡಬೇಕು ಎಂದು ಅಭಿಪ್ರಾಯ ಇದೆ.

ಶ್ರೀ ಎಸ್. ಬಂಗಾರಪ್ಪ.—ಜಿಲ್ಲಾ ಪರಿಷತ್ತು ರಚನೆ ಮಾಡುತ್ತೇವೆಂದು ಒಂದೂವರೆ ವರ್ಷಗಳ ಹಿಂದೆ ಈ ಸದನದಲ್ಲಿ ಹೇಳಿದ್ದಿರಿ. ಆದರೆ ಇಲ್ಲಿಯವರೆಗೂ ಅದಕ್ಕೆ ಸಂಬಂಧಪಟ್ಟ ಬಿಲ್ಲು ತಂದಿಲ್ಲ. ಈ ಅಧಿವೇಶನ ಮುಗಿಯುವುದರೊಳಗೆ ತರತಕ್ಕ ಉದ್ದೇಶವನ್ನು ಸರಕಾರದವರು ಹೊಂದಿದ್ದಾರೆಯೇ ?

ಶ್ರೀ ಪಿ. ಎಂ. ನಾಡಗೌಡ.—ಅದು ಕಷ್ಟವಾಗಬಹುದು. ಸರಕಾರದವರು ಈಗ ರಾಡಿಪಾರ್ಟುಮೆಂಟಿನಲ್ಲಿ ವಿಚಾರ ಮಾಡಲಿಕ್ಕೆ ಹತ್ತಿದ್ದಾರೆ. ಇನ್ನೊಂದು ವಿಚಾರ, ಶಿಕ್ಷಣ ಖಾತೆಯವರು ಶಿಕ್ಷಣ ಮಂಡಲ ಮಾಡಬೇಕು ಎಂದು ಮಾಡಿದ್ದರು. ಆದರೆ ಈಗ ಮಾಡುವುದಿಲ್ಲ ಎಂದು ನಿರ್ಧಾರ ಮಾಡಿದ್ದಾರೆ. ಇದನ್ನೆಲ್ಲಾ ವಿಚಾರ ಮಾಡಿ ತರಲಿಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊವ್ಮಾಯಿ.—ಈ ಸೆಷನ್ನಿನಲ್ಲಿ ಆಗದಿದ್ದರೆ ಮುಂದಿನ ಸೆಷನ್ನಿನಲ್ಲಾದರೂ ಇದನ್ನು ತರುತ್ತೀರಾ ?